


## ಮೂಢರ ಮನಕೆ ತಾಕಬೇಕು

‘ಜಂಬೂಕನ ಕಥೆ’ (ಆ. 08, ಕೌಂಡಿನ್ಯ ಕೊಡ್ಲುತೋಟ) ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಒಂದು ಮರದ ಬದುಕು, ಸಾರ್ಥಕತೆ, ಆತಂಕಗಳನ್ನು ಸೇರಿಸಿ ಕಥೆಯಾಗಿಸಿದ ಪರಿ ಇಷ್ಟವಾಯಿತು. ಅದರಲ್ಲೂ ಕೊನೆಯ ಸಾಲು ‘ನಿಮಗೆ ಕಡಿಯಲು ಮುಂದೆ ಮರಗಳು ಬೇಕಲ್ಲಾ...’ ಎಂಬ ಮಾತಿನ ಹರಿತದ ಮೊನೆ ಮರ ಕಡಿವ ಮೂಢರ ಮನಕೆ ತಾಕಿದರಷ್ಟೇ ಸಾಕು.

—ನಿಂಗಮ್ಮ ಭಾವಿಕಟ್ಟಿ ಹುನಗುಂದ, ಬಾಗಲಕೋಟೆ

## ವೃಕ್ಷ ಸಂದೇಶ



ಪರಿಸರದ ಒಡಲಬೇಗೆಯನ್ನು ಅದರ ಭಾಷೆಯಲ್ಲಿಯೇ ಹೇಳಿಸಿದ್ದು ಆಪ್ತವೆನಿಸಿತು. ಮನುಜಕುಲದ ಎರಡೂ ಮುಖಗಳನ್ನು ಪರಸ್ಪರ ಎದುರಾಗಿಸಿ ಸಸ್ಯ ಸಂಪತ್ತಿನ ಸಾಂಕೇತಿಕವಾಗಿ ನೇರಳೆ ಮರವನ್ನು ಉಳಿಸಿ ಕಥೆ ಹೇಳಿರುವ ರೀತಿ ಪ್ರಭಾವಕಾರಿ ಎನಿಸಿತು. ಪರಿಸರದ ಜೀವಂತ ಕೊಂಡಿಗಳ ಉಳಿಯುವಿಕೆಯೊಂದೇ ನಮ್ಮ ಭವಿಷ್ಯಕ್ಕೆ ಅನಿವಾರ್ಯ ಎಂಬ ಸಂದೇಶವನ್ನು ಸಾರಿದೆ.

—ಸುಮಾ ಕೆ.ಎಚ್.

## ಮೆಚ್ಚುಗೆಯಾದ ಕಥೆ

ಮರದ ಕಥೆ ಬಹಳ ಇಷ್ಟವಾಯಿತು. ಒಂದು ಮರವನ್ನು ಮನುಷ್ಯನಂತೆಯೇ ಭಾವಿಸಿ ಬರೆದ ಸಾಲುಗಳು ಮನತಟ್ಟುವಂತಿದ್ದವು.

—ಭಾವನಾ ಎಚ್.ಜಿ., ಬೆಂಗಳೂರು

## ವಿಚಾರಧಾರೆ...

‘ಸುಧಾ’ದಲ್ಲಿ ತಪ್ಪದೇ ಓದಬೇಕಾದ ಅಂಕಣದಲ್ಲಿ ‘ವಿಚಾರ ಲಹರಿ’ಗೆ ನನ್ನದು ಪ್ರಥಮ ಆದ್ಯತೆ. ವಾರದಿಂದ ವಾರಕ್ಕೆ ಒಂದು ವಿಷಯವನ್ನು ಆಯ್ದುಕೊಂಡು ಅರ್ಥಪೂರ್ಣವಾಗಿ ವಿಮರ್ಶಿಸುತ್ತಾ, ಉದಾಹರಿಸುತ್ತಾ ಹೇಳುವ ರೀತಿ ಮನ ತಟ್ಟುವಂತಿರುತ್ತದೆ. ತಿಳಿವಳಿಕೆಗೆ, ಅನುಭವಕ್ಕೆ ಹೇಳಿಮಾಡಿಸಿದ ವಿಚಾರಧಾರೆ.

—ಮಹಾಂತೇಶ ಎಸ್. ಪಾಟೀಲ, ಹುನಗುಂದ

## ಕಚಗುಳಿಯಿಟ್ಟ ಲಹರಿ

‘ಮಳೆ ಬರುವ ಕಾಲಕ್ಕ’ (ಆ. 08, ಲತಾ ಹೆಗಡೆ) ಮನಸ್ಸನ್ನು ಮುದಗೊಳಿಸಿ, ಬಾಲ್ಯಕ್ಕೆ ಕರೆದೊಯ್ಯಿತು. 50–60ರ ದಶಕದ ನಮ್ಮೂರಿನ ಅಂಗಳದ, ಸ್ನಾನದ ಮನೆ, ಹಿತ್ತಲಿನ ನೆನಪು, ಮಳೆಯ ಸುಂದರ ದೃಶ್ಯಗಳು ಮನಸ್ಸಿಗೆ ಕಚಗುಳಿಯಿಟ್ಟವು. ಲೇಖಕಿಯ ಅನುಭವಗಳು ಆ ಕಾಲದ ನಮ್ಮೆಲ್ಲರ ಅನುಭವವೂ ಹೌದು! ಮನಸಾರೆ ನಕ್ಕ ನಂತರ ಕಣ್ಣಂಚು ಒದ್ದೆಯಾಯಿತು.

—ಕೆ.ಆರ್. ಶಕುಂತಲಮ್ಮ



## ಮಾರ್ಗದರ್ಶಿ

‘ತಾನೊಂದು ಬಗೆದರೆ’ (ಆ. 01, ಬಿ.ಎಲ್. ವೇಣು) ಕಥೆ ಬಹಳ ಸೊಗಸಾಗಿದೆ, ಈಗಿನ ಯುವಕರಿಗೆ ಮಾರ್ಗದರ್ಶಕವಾಗಿದೆ.

—ಟಿ.ಕೆ. ಶಾಂತಪ್ಪ, ರಾಮನಗರ

## ಕಾಡಿದ ‘ವರ್ಷ ವಿಹಾರ’

‘ವರ್ಷ ವಿಹಾರ’ (ಆ. 08, ಪ್ರಸಾದ ಶೆಣೈ ಆರ್.ಕೆ.) ‘ಮಳೆ ವಿಶೇಷ’ ಸಂಚಿಕೆಯ ಮುಖಪುಟ ಲೇಖನ, ಚಿತ್ರಗಳು ಮನ ಮುಟ್ಟುವಂತಿವೆ. ಸಂಚಿಕೆ ಮೂಲಕ ಮಳೆಯ ಸೊಬಗನ್ನು ಸವಿದೆ. ಚಿಕ್ಕವಳಿದ್ದಾಗ ಮಳೆಯಲ್ಲಿ ನೆನೆದು ಖುಷಿಯಾಗಿ ಕಳೆದ ದಿನಗಳನ್ನು ಬರಹ ನೆನಪಿಸಿತು.

—ನಂದಿನಿ ಆರ್. ರಾವ್, ಬೆಂಗಳೂರು

## ನೆನಪುಗಳ ಮಳೆ

ಲೇಖನ ಓದುತ್ತಿದ್ದಂತೆ ನನ್ನ ಮನಸ್ಸು 35 ವರ್ಷದ ಹಿಂದಕ್ಕೆ ಓಡಿತು. ಒಳಪುಟಗಳನ್ನು ತಿರುವಿ ಹಾಕುತ್ತಿದ್ದರೆ ಮತ್ತಷ್ಟು ನೆನಪುಗಳು ಮುತ್ತಿಕ್ಕಿದವು. ಮಳೆ, ಹಸುರು ಹೊದಿಕೆಯ ಗುಡ್ಡಗಳು ಕಣ್ಣನ ತಣಿಸಿದವು. ಉತ್ಸಾಹ, ಆನಂದ ತುಂಬಿದ ಲೇಖನ. ಮಳೆಯಲ್ಲಿ ಜೋರಾದ ಜೋಗಜಲಪಾತದ ಸೊಬಗನ್ನೂ ಮರೆಯಲು ಸಾಧ್ಯವಿಲ್ಲ.

—ಪಾರ್ವತಿ ಎಂ., ಬೆಂಗಳೂರು

## ಇಳೆಯ ಕಾವ್ಯ

‘ಮಳೆ’ ಪ್ರತಿಯೊಂದು ಜೀವರಾಶಿಯಲ್ಲೂ ನವಚೈತನ್ಯ ತುಂಬುತ್ತದೆ. ಮಳೆ ಮನುಷ್ಯನಿಗೆ ಪ್ರಕೃತಿಯ ಅಮೋಘ ದರ್ಶನ ಮಾಡಿಸುತ್ತದೆ. ದೇಹ– ಮನಸ್ಸಿಗೆ ಹುಮ್ಮಸ್ಸು ತುಂಬುತ್ತದೆ ಎಂಬ ಲೇಖಕರ ಮಾತುಗಳು ಬಹಳ ನಿಜ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

## ಉಲ್ಲಾಸ ತುಂಬಿದ ಸಂಚಿಕೆ

‘ಮಳೆ ವಿಶೇಷ’ (ಆ. 08) ಸಂಚಿಕೆಯಲ್ಲಿ ಮಿಂಚಿನ ಕುರಿತ ಬಣ್ಣಬಣ್ಣದ ಬರಹ ಉತ್ತಮ ಮಾಹಿತಿ ನೀಡಿತು. ಮಳೆ ಪ್ರವಾಸದ ಕುರಿತ ಮುಖಪುಟ ಬರಹ, ಹಚ್ಚಹಸುರಿನ ಛಾಯಾಚಿತ್ರಗಳು ಉಲ್ಲಾಸ ತುಂಬಿದವು. ಹುತ್ತಿದ್ರುರ್ಗದ ಪಿಸುಮಾತುಗಳು ಕೇಳಿ ರೋಮಾಂಚನವಾಯಿತು. ಹಾಗೇ ವಿಜ್ಞಾನಿಗಳ ವೈಯಕ್ತಿಕ ವಿಚಾರಗಳ ಸರಣಿ ಚಾರ್ಲ್ಸ್ ಡಾರ್ವಿನ್ ವಿವಾಹ, ಅವರ ಬದುಕಿನ ಕುರಿತ ಓದು ವಿಶೇಷ ಎನಿಸಿತು. ವಿನೂತನ ಸುದ್ದಿಗಳನ್ನು ಹೊತ್ತು ತರುವ ‘ಸುಧಾ’ಳನ್ನು ಕಂಡರೆ ನನಗೆಲ್ಲಿಲ್ಲದ ಅಕ್ಕರೆ.

—ರೇಶ್ಮಾಗುಳೇದಗುಡ್ಡಾಕರ್, ಕೊಟ್ಟೂರು

## ಜ್ಞಾನವಾಹಿ ಧಾರಾವಾಹಿ

ನಟರಾಜ್ ಹುಳಿಯಾರ್ ಅವರ ‘ಡಾಕ್ಟರ್ ಸಾಹೇಬ್’ ಧಾರಾವಾಹಿ ಜ್ಞಾನವಾಹಿಯಾಗಿದೆ. ಒಂದು ಕಾಲಘಟ್ಟದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಚರಿತ್ರೆಯನ್ನು ಆಧಾರಸಹಿತ ಪ್ರಸ್ತುತಪಡಿಸಲಾಗುತ್ತಿದೆ. ಸರ್ಕಾರಿ ಆಡಳಿತ ಹೇಗೆ ಕುಟುಂಬಗಳ ಸ್ವತ್ತಾಗುತ್ತಿದೆ ಎಂಬ ಬಗ್ಗೆ ಲೋಹಿಯಾ ಅವರು ಹೇಳಿದ ಮಾತು ಬಹಳ ಪ್ರಸ್ತುತ. ‘ಒಂದು ರಾಜ್ಯದಲ್ಲಿ ಅಪ್ಪ ಸಾರಿಗೆ ವ್ಯವಹಾರ ನೋಡಿಕೊಳ್ಳುತ್ತಾನೆ. ಮಗ ವಾಹನಗಳನ್ನು ಸರಬರಾಜು ಮಾಡುತ್ತಾನೆ. ವ್ಯಾಪಾರ ರಾಜಕಾರಣಗಳ ದೂರ್ತ ಸಂಬಂಧ ಸೃಷ್ಟಿಯಾಗಿದೆ. ಒಂದು ಮನೆಯಲ್ಲಿ ಒಬ್ಬ ರಾಜಕಾರಣಕ್ಕಿಳಿಯುತ್ತಾನೆ; ಮತ್ತೊಬ್ಬ ವ್ಯಾಪಾರಕ್ಕಿಳಿಯುತ್ತಾನೆ...’ ಎಂಬ ನುಡಿ ಇಂದಿನ ರಾಜಕಾರಣದ ಬಗ್ಗೆ ಅರಿವು ಮೂಡಿಸುತ್ತದೆ.



—ವಲಿ ಆರ್., ಚಿತ್ರದುರ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in